ಮಂಗಳೂರು – ಹಾಸನ – ಬೆಂಗಳೂರು ರೈಲ್ವೆ ಯೋಜನೆ.

522 (6119) : **ಶ್ರೀ ರಘುಪತಿ ಭಟ್ ಕೆ. (ಉಡುಪಿ)** : ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರು–ಹಾಸನ–ಬೆಂಗಳೂರು ರೈಲ್ವೆ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಆ) ಈ ಯೋಜನೆಗೆ ತಗಲುವ ವೆಚ್ಚವೆಷ್ಟು; ಯಾವ ವರ್ಷದಲ್ಲಿ ಎಷ್ಟೆಷ್ಟು ಹಣ ಕೇಂದ್ರ ಸರ್ಕಾರದಿಂದ ಬಿಡುಗಡೆ ಆಗಿದೆ;

ಇ) ಈ ಯೋಜನೆ ಇಷ್ಟು ವಿಳಂಬವಾಗಲು ಕಾರಣವೇನು;

ಈ) ಈ ಯೋಜನೆಗೆ ರಾಜ್ಯ ಸರ್ಕಾರದ ಪಾಲು ಎಷ್ಟು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಮಂಗಳೂರು–ಹಾಸನ ಮಾರ್ಗದ ರೈಲ್ವೆ ಗೇಜ್ ಪರಿವರ್ತನೆ ಕೆಲಸವನ್ನು ದಕ್ಷಿಣ ನೈರುತ್ಯ ರೈಲ್ವೆಯವರಿಗೆ ವಹಿಸಲಾಗಿದ್ದು, ಹಾಲಿ ಸಕಲೇಶಪುರದಿಂದ ಸುಬ್ರಮಣ್ಯ ರಸ್ತೆ ಭಾಗದಲ್ಲಿ (55 ಕಿ.ಮೀ) ಕೆಲಸ ಪ್ರಗತಿಯಲ್ಲಿದೆ. ಶೀಘ್ರದಲ್ಲಿ ಪೂರ್ಣಗೊಳಿಸುವ ನಿರೀಕ್ಷೆ ಇದೆ. ಈಗ ಲಭ್ಯವಿರುವ ಮಾಹಿತಿಯ ಪ್ರಕಾರ, ಸರಕು ಸಾಗಣೆ ರೈಲು 2005 ಸೆಪ್ಟಂಬರ್‌ನಲ್ಲಿ ಪ್ರಾರಂಭಿಸಬಹುದೆಂದು ನಿರೀಕ್ಷಿಸಲಾಗಿದೆ.

ಹಾಸನ – ಶ್ರವಣಗೊಳ – ಬೆಂಗಳೂರು ಮಾರ್ಗವು ಹೊಸ ರೈಲು ಮಾರ್ಗವು ಹೊಸ ರೈಲು ಮಾರ್ಗವಾಗಿರುತ್ತದೆ. ಬೆಂಗಳೂರು–ನೆಲಮಂಗಲ ಮತ್ತು ಹಾಸನ–ಶ್ರವಣಬೆಳಗೊಳ ಈ ಎರಡು ಮಾರ್ಗಗಳಲ್ಲಿ ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಶ್ರವಣಬೆಳಗೊಳ ಮತ್ತು ನೆಲಮಂಗಲ ಮಧ್ಯೆ ಯೋಜನೆಗೆ ಬೇಕಾಗಿರುವ ಭೂಮಿಯ ನಿರ್ಧಾರಣೆ ಮಾಡಿ ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಯೋಜನೆಯ ಅಂದಾಜು ವೆಚ್ಚ ರೂ. 412.91 ಕೋಟಿಗಳು, ರೈಲ್ವೆ ಮಂತ್ರಾಲಯವು ಈ ಯೋಜನೆಗೆ ಚಾಲ್ತಿ ವರ್ಷದಲ್ಲಿ ರೂ. 20.00 ಕೋಟಿಗಳನ್ನು ಮಂಜೂರು ಮಾಡಿದೆ.

ಈ ಯೋಜನೆ ರೈಲ್ವೆಯವರ ಯೋಜನೆಯಾಗಿದ್ದು, ರಾಜ್ಯ ಸರ್ಕಾರದ ಪಾಲು ಇರುವುದಿಲ್ಲ.

ಶ್ರೀ ಕೆ. ರಘುಪತಿ ಭಟ್ : ಮಾನ್ಯ ಉಪಾಧ್ಯಕ್ಷರೆ, ವಿವರವಾದ ಹೇಳಿಕೆಯನ್ನು ನಿನ್ನೆ ತಾನೇ ಸಚಿವರು ಕೊಟ್ಟಿದ್ದಾರೆ. ಆದರೆ, ಈಗ ಕೊಟ್ಟಂಥ ಒಂದು ಉತ್ತರದಲ್ಲಿ ನಾನು ಒಂದು ಕೇಳಿದ್ದೆ ಈ ಯೋಜನೆಗೆ ತಗಲುವ ವೆಚ್ಚ ಎಷ್ಟು? ಯಾವ್ಯಾವ ವರ್ಷಗಳಲ್ಲಿ ಎಷ್ಟೆಷ್ಟು ಹಣ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿದೆ ಎಂದು ಕೇಳಿದ್ದೆ. ಅದನ್ನು ಒದಗಿಸಲಿಲ್ಲ. ಅದರ ಬಗ್ಗೆ ಸಚಿವರ ಹತ್ತಿರ ಮಾಹಿತಿ ಇದ್ದರೆ ಒದಗಿಸಿಕೊಡಬೇಕೆಂದು ವಿನಂತಿಸಿಕೊಳ್ಳುತ್ತಿದ್ದೇನೆ. ಇನ್ನೊಂದು, ಈಗ ಇನ್ನು ಹಣದ ಕೊರತೆ ಎಷ್ಟಿದೆ ಎಂದು ಕೇಳುತ್ತಿದ್ದೇನೆ. ಏಕೆಂದರೆ, ಮಂಗಳೂರು–ಹಾಸನ–ಬೆಂಗಳೂರು ರೈಲ್ವೆಗೆ ನಾವು ಚಾತಕಪಕ್ಷಿಯಂತೆ ಬಹಳ ವರ್ಷಗಳಿಂದ ಕಾಯುತ್ತಿದ್ದ ಒಂದು ಯೋಜನೆಯಾಗಿದೆ. ಇದನ್ನು ಸಂಪೂರ್ಣಗೊಳಿಸಬೇಕಾದರೆ, ಇನ್ನೇನಾದರೂ ಹಣಕಾಸಿನ ತೊಂದರೆ ಇದೆಯೇ? ಇನ್ನೆಷ್ಟು ಹಣ ಬೇಕಾಗುತ್ತದೆ ಎನ್ನುವುದನ್ನು ತಿಳಿಸಬೇಕು. ಇನ್ನೊಂದು, ಈ ಯೋಜನೆ ವಿಳಂಬವಾಗಲು ಕಾರಣವೇನು

ಎಂದು ಹೇಳುವಂತಾದ್ದು ನಾನು ಕೇಳಿದ್ದೆ ಅದಕ್ಕೆ ಉತ್ತರ ಬರಲಿಲ್ಲ. ಮತ್ತೊಂದು, ರಾಜ್ಯ ಸರ್ಕಾರದ ಪಾಲು ಎಷ್ಟು ಎಂದು ಕೇಳಿದ್ದಕ್ಕೆ ಈ ಯೋಜನೆಗೆ ರಾಜ್ಯ ಸರ್ಕಾರದ ಪಾಲು ಇರುವುದಿಲ್ಲವೆಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ, ನಿನ್ನೆ ಉತ್ತರ ಕೊಡುವಂಥ ಸಂದರ್ಭದಲ್ಲಿ ಎಂಎಸ್‌ಐಎಲ್‌ನಿಂದ 8 ಕೋಟಿ ರೂಪಾಯಿಗಳಷ್ಟು ಹಣ ಕೊಡುತ್ತೇನೆಂದಿದ್ದರು. ಅದು ಯಾವುದಕ್ಕೋಸ್ಕರ? ಇದರಲ್ಲಿ ರಾಜ್ಯ ಸರ್ಕಾರದ ಪಾಲು ಇದೆಯೇ ಅಥವಾ ಕೇಂದ್ರ ಸರ್ಕಾರದ ಪಾಲು ಮಾತ್ರ ಇದೆಯೇ ಎಂಬ ಬಗ್ಗೆ ನನಗೆ ಸ್ಪಷ್ಟೀಕರಣ ಬೇಕಾಗಿದೆ. ಮತ್ತೊಂದು, ಕೊಂಕಣ ರೈಲ್ವೆಗೆ ಕನೆಕ್ಷನ್ ಮಾಡುವಂಥಾದ್ದನ್ನು ಯಾವಾಗ ಸಂಪೂರ್ಣಗೊಳಿಸಬಹುದು? ಕೊನೆಯದಾಗಿ, ನನ್ನ ಮೂಲ ಪ್ರಶ್ನೆ ಇರುವಂಥಾದ್ದು ಏನೆಂದರೆ, ಯಾವಾಗ ಈ ಯೋಜನೆಯನ್ನು ಸಂಪೂರ್ಣಗೊಳಿಸಬಹುದು? ಇದಕ್ಕೆ ಸ್ಪಷ್ಟವಾದ ಉತ್ತರ ಇಲ್ಲ. ಇಲ್ಲಿ ಕೇವಲ ಸರಕು ಸಾಗಣೆ ರೈಲು ಮಾತ್ರ 2005ರ ಸೆಪ್ಟೆಂಬರ್‌ನಲ್ಲಿ ಪ್ರಾರಂಭಿಸಲಾಗುವುದು ಎಂದು ಇದೆ. ಪ್ರಯಾಣಿಕರ ರೈಲನ್ನು ಯಾವಾಗಿನಿಂದ ಪ್ರಾರಂಭಿಸಲಾಗುವುದು ಎಂಬುದನ್ನು ದಯವಿಟ್ಟು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಸಭಾಧ್ಯಕ್ಷರೆ, ಮಾನ್ಯ ರಘುಪತಿ ಭಟ್‌ರವರು ಕೇಳಿರುವ ಎಲ್ಲಾ ಅಂಕಿ–ಅಂಶಗಳೂ ರೈಲ್ವೆ ಇಲಾಖೆಗೆ ಸಂಬಂಧಪಟ್ಟಿರತಕ್ಕವು. ಆದರೆ, ಖಂಡಿತವಾಗಿಯೂ ರೈಲ್ವೆ ಇಲಾಖೆಯಿಂದ ಈ ಎಲ್ಲಾ ಅಂಕಿ–ಅಂಶಗಳನ್ನು ತರಿಸಿ ಕೊಡುತ್ತೇನೆ. ಈ ಸಪ್ಟೆಂಬರ್ ಅಷ್ಟೊತ್ತಿಗೆ ಹಾಸನ ಮತ್ತು ಮಂಗಳೂರು ಮಧ್ಯೆ ರೈಲು ಪ್ರಯಾಣ ಪ್ರಾರಂಭವಾಗುತ್ತದೆಂದು ನಾನು ಈಗಾಗಲೇ ತಿಳಿಸಿದ್ದೇನೆ. ಮತ್ತು ಇದಕ್ಕೆ ಸಂಬಂಧಪಟ್ಟ ಹಾಗೆ ಈ ನಾಲ್ಕೂ ರೈಲ್ವೆ ಡಿವಿಜನ್‌ಗಳು ಕರ್ನಾಟಕಕ್ಕೆ ಸಂಬಂಧಪಟ್ಟಿದ್ದು ಏನಿದೆ, ಅದರ ಬಗ್ಗೆ ಆ ಅಧಿಕಾರಿಗಳು ಮತ್ತು ಶಾಸಕರುಗಳ ಒಂದು ಸಭೆ ಕರೆಯುತ್ತಿದ್ದೇನೆ. ಅಷ್ಟೊತ್ತಿಗೆ ಅವರು ಕೇಳಿರುವ ಎಲ್ಲಾ ಅಂಕಿ–ಅಂಶಗಳನ್ನೂ ನಾನು ಒದಗಿಸಿಕೊಡುತ್ತೇನೆ.

ಶ್ರೀ ಕೆ. ರಘುಪತಿ ಭಟ್ : ರಾಜ್ಯ ಸರ್ಕಾರದ ಪಾಲು ನಿನ್ನೆ ಎಂಎಸ್‌ಐಎಲ್‌ನಿಂದ ಬಿಡುಗಡೆ ಮಾಡುತ್ತೇನೆಂದು ಹೇಳಿದ್ದು, ಯಾವ ಉದ್ದೇಶಕ್ಕೋಸ್ಕರ ಎಂಬುದನ್ನು ಸ್ಪಷ್ಟಪಡಿಸಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೆ, ಹಾಸನ ಮತ್ತು ಮಂಗಳೂರು ಮಧ್ಯೆ Special Purpose Vehicle ಎಂದು ಏನು ಮಾಡಿದ್ದೇವೆ, ಅದಕ್ಕೆ ಸಂಬಂಧಪಟ್ಟ ಹಾಗೆ ನಾವು ಸುಮಾರು ಏಳು ಕೋಟಿ ಚಿಲ್ಲರೆ ರೂಪಾಯಿಗಳಷ್ಟು ಹಣ ಬಿಡುಗಡೆ ಮಾಡಬೇಕಾಗಿದೆ. ಅದನ್ನು ಇನ್ನು 8–10 ದಿವಸಗಳಲ್ಲಿ ಬಿಡುಗಡೆ ಮಾಡುತ್ತೇವೆ.

ಶ್ರೀ ಎನ್. ಯೋಗಿಶ್ ಭಟ್ :– ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟ ಹಾಗೆ ರೈಲ್ವೆ ವಲಯ ಯಾವುದು ಇದೆ ಅದು ಪಾಲ್ಘಾಟ್ ವಲಯಕ್ಕೆ ಸೇರುತ್ತೆ, ಅದನ್ನು ನೈರುತ್ಯ ವಲಯಕ್ಕೆ ಸೇರಿಸುವುದರ ಮೂಲಕ ವಿಶೇಷವಾಗಿ ಪೋರ್ಟ್ ಕನೆಕ್ಟಿವಿಟಿ ಸಿಗುವುದರಿಂದ ನೈರುತ್ಯ ವಲಯಕ್ಕೆ ಸೇರಿಸುವ ಬಗ್ಗೆ ವಿಶೇಷ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ. ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ, ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆಯನ್ನು ನಾನು ಸ್ವೀಕಾರ ಮಾಡಿದ್ದೇನೆ. ಸಲಹೆ ಬಹಳ ಉತ್ತಮವಾಗಿದೆ ಅದನ್ನು ಅಧಿಕಾರಿಗಳ ಜೊತೆ ಚರ್ಚೆ ಮಾಡುವಾಗ ಕೇಂದ್ರ ಸರ್ಕಾರದ ಜೊತೆಯಲ್ಲಿ, ಈ ಪ್ರಸ್ತಾವನೆಯನ್ನು ತೆಗೆದುಕೊಂಡು ಹೋಗುವಂತಹ ಸಂದರ್ಭದಲ್ಲಿ ಪರಿಶೀಲನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ರೈಲ್ವೆ ಬೇಡಿಕೆಗಳ ಬಗ್ಗೆ ಇಲ್ಲಿ ಕೇಳುವವರು ಯರೂ ಇರಲಿಲ್ಲ ಕೇಳಲಿ ಸಂತೋಷ. ನಾನು ತಮಗೆ ಏನು ಹೇಳುತ್ತೇನೆ ಅಂದರೆ ಇಡೀ ಸಮಗ್ರ ಕರ್ನಾಟಕ ರಾಜ್ಯದ ರೈಲ್ವೆ ಬೇಡಿಕೆಗಳ ಬಗ್ಗೆ ತಾವು ಕೇಂದ್ರ ಸರ್ಕಾರದ ಜೊತೆಯಲ್ಲಿ ಮಾತನಾಡಿದ್ದೀರಾ? ಮನವಿ ಕೊಟ್ಟಿದ್ದೀರಾ? ಯಾರ್ಯಾರನ್ನು ಭೇಟಿ ಮಾಡಿದ್ದೀರಿ ಎನ್ನುವುದನ್ನು ಸ್ವಲ್ಪ ಹೇಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೇ, ಇದೊಂದು ಪ್ರತ್ಯೇಕ ಪ್ರಶ್ನೆಯಾಗುತ್ತದೆ. ಆದರೂ ಸಹ ಅವರು ಈ ಸದನದಲ್ಲಿ ಪ್ರಸ್ತಾಪ ಮಾಡಿರುವುದರಿಂದ...

ಶ್ರೀ ಜೆ. ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೇ, ಇದು ನಿಯಮಗಳಿಗೆ ವಿರುದ್ಧ, ರೈಲ್ವೆಗೆ ಸಂಬಂಧಪಟ್ಟಂತಹ ಪ್ರಶ್ನೆಗಳನ್ನು ಇಲ್ಲಿ ಕೇಳಬಾರದು.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಇಲ್ಲಾ ಇಲ್ಲಾ ಪ್ರಶ್ನೆ ಕೇಳಬಹುದು, ಏಕೆಂದರೆ...

ಶ್ರೀ ವಾಟಾಳ್ ನಾಗರಾಜ್ :– ನಾವು ದುಡ್ಡು ಖರ್ಚು ಮಾಡುತ್ತಿದ್ದೇವೆ ಕೇಳಬಾರದು ಅಂದರೆ ಹೇಗೆ?

ಶ್ರೀ ಜೆ. ಸಿ. ಮಾಧುಸ್ವಾಮಿ :– ತಾವು ರೂಲ್ಸ್ ಪುಸ್ತಕವನ್ನು ತರಿಸಿ ಸಾರ್. ನಾನು ಕ್ರಿಯಾಲೋಪ ಎತ್ತಿದ್ದೇನೆ. ಕೇಳುವಂತೆ ಇಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಒಂದು ನಿಮಿಷ. ಮಾನ್ಯ ಉಪಾಧ್ಯಕ್ಷರೇ, ನಾವು ರೈಲ್ವೆ ಬಗ್ಗೆ ಪ್ರಶ್ನೆ ಕೇಳಬಹುದು, ಏಕೆಂದರೆ ನಾವು ರೈಲ್ವೆ ಇಲಾಖೆ ಜೊತೆಯಲ್ಲಿ ಅನೇಕ ಯೋಜನೆಗಳಿಗೆ ಒಪ್ಪಂದವನ್ನು ಮಾಡಿಕೊಂಡು ಹಣಕಾಸನ್ನು ಕೊಟ್ಟಿದ್ದೇವೆ. ಇದು ಮೊದಲನೆಯದು.

ಎರಡನೆಯದು ಈಗ ಹಾಸನ ಮಂಗಳೂರು ಇದೆ ಕೆರೈಡ್ ಅಂತ ಕರ್ನಾಟಕ ರೈಲ್ವೆ ಡಿಪಾರ್ಟ್‌ಮೆಂಟ್ ಅಂತ ಒಂದು ಮಾಡಿಕೊಂಡಿದ್ದೇವೆ. ಅದಕ್ಕೋಸ್ಕರ ಒಂದು ಸ್ಪೆಷಲ್ ಪರ್‌ಪಸ್ ವೆಹಿಕಲ್‌ನ್ನು ಮಾಡಿಕೊಂಡಿದ್ದೇವೆ. ಗದಗ ಮತ್ತು ಬಿಜಾಪುರದ ಮಧ್ಯೆ ಇರತಕ್ಕಂಥ ಬ್ರಾಡ್‌ಗೇಜ್ ಮೀಟರ್‌ಗೇಜನ್ನು ಬ್ರಾಡ್‌ಗೇಜ್ ಮಾಡಲಿಕ್ಕೆ ನಾವು ಹಣವನ್ನು ಕೊಟ್ಟಿದ್ದೇವೆ. ಹಣವನ್ನು ಕೊಟ್ಟಿರುವುದರಿಂದಾಗಿ ಈ ಹಣಕ್ಕೆ ಮಂಜೂರಾತಿಯನ್ನು ಕೊಡತಕ್ಕಂಥಾದ್ದು ಈ ಸದನ. ಅದರ ವಿವರಗಳನ್ನು ಕೇಳುವುದರಲ್ಲಿ ಏನೂ ಸಹ ತಪ್ಪಿಲ್ಲ ಎನ್ನತಕ್ಕಂಥಾದ್ದು ನನ್ನ ಅಭಿಪ್ರಾಯ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೇ, ಅವರು ಪ್ರಶ್ನೆ ಬೇಕಾದರೆ ಹೀಗೆ ಕೇಳಿದರೆ ಉತ್ತರ ಕೊಡಬಹುದು. ಕರ್ನಾಟಕದ ಪಾಲು ಹಣವನ್ನು ಕೊಡಲಾಗಿದೆಯೇ ಅಂತ ಏನಾದರೂ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು. ಆದರೆ ರೈಲ್ವೆ ಮಾರ್ಗ ಯಾವಾಗ ಆಗುತ್ತದೆ ಅಂದರೆ ಅದು ಕೇಂದ್ರ ರೈಲ್ವೆ ಇಲಾಖೆಗೆ ಸಂಬಂಧಪಟ್ಟಿದ್ದು. ನೀವು ಮಾರ್ಗ ಮಾಡುವುದಕ್ಕೆ ಬರುವುದಿಲ್ಲ. ಅದು ಹೇಗೆ ಉತ್ತರ ಕೊಡುತ್ತೀರಿ ನೀವು? ನಿಮ್ಮ ಕೈಯಲ್ಲಿ ಇಲ್ಲದೇ ಇರುವ ಅಧಿಕಾರಕ್ಕೆ ಅದು ಹೇಗೆ ನೀವು ಉತ್ತರ ಕೊಡುತ್ತೀರಿ? ಅದು ನಾಳೆ ಭರವಸೆಗಳ ಸಮಿತಿ ಮುಂದೆ ಬರುತ್ತದೆ. ಭರವಸೆ ಸಮಿತಿಯವರು ಏನು ಕೇಳುವುದು? ರೈಲ್ವೆ ಮಂತ್ರಿಗಳು ಕೇಂದ್ರದಲ್ಲಿ ಇದ್ದಾರೆ. ಅವರು ಕರ್ನಾಟಕದ ಪಾಲಿನ ಹಣವನ್ನು ಕೊಡಲಾಗಿದೆಯೆ ಅಂತ ಕೇಳಬಹುದು. ಅದರ ಬಗ್ಗೆ ನೀವು ಉತ್ತರ ಹೇಳುವುದಕ್ಕೆ ಜವಾಬ್ದಾರಿ ಇದೆ ನೀವು ಉತ್ತರ ಹೇಳಬೇಕಾಗುತ್ತದೆ. ರೈಲ್ವೆ ಮಾರ್ಗದ ಬಗ್ಗೆ ಕೇಳುವಾಗ ನೀವು ಹೇಗೆ ಉತ್ತರ ಕೊಡುತ್ತೀರಿ?

ಶ್ರೀ ಪಿ. ಜಿ. ಆರ್. ಸಿಂಧ್ಯಾ :-- ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕಂಥ ಎಲ್ಲಾ ವಿಚಾರಗಳ ಬಗ್ಗೆಯು ಪ್ರಶ್ನೆ ಕೇಳಬಹುದು, ಉತ್ತರ ಕೊಡತಕ್ಕಂಥ ಸಾಮರ್ಥ್ಯವಿದ್ದರೆ ಉತ್ತರ ಕೊಡಬಹುದು, ನಮ್ಮ ಹತ್ತಿರ ಉತ್ತರ ಕೊಡುವುದಕ್ಕೆ ಸಾಮರ್ಥ್ಯವಿಲ್ಲದಿದ್ದರೆ ಇಲ್ಲ ಅಂಥ ಹೇಳುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕ್ಷರೇ, ಸಾಮರ್ಥ್ಯದ ಪ್ರಶ್ನೆಯಲ್ಲ. ಇಂಪ್ಲಿಮೆಂಟೇಷನ್ನಿನ ಪ್ರಶ್ನೆ. ಉತ್ತರ ಕೊಟ್ಟಿದ್ದನ್ನು ನಾಳೆ ಇಂಪ್ಲಿಮೆಂಟ್ ಮಾಡುತ್ತೀರಾ ಎನ್ನುವ ಪ್ರಶ್ನೆ. ಅಲ್ಲಿ ನಾವು ಕೇಳಬೇಕಾಗಿರುವ ಪ್ರಶ್ನೆಯನ್ನು ನಾವು ಇಲ್ಲಿ ಕೇಳುತ್ತಿದ್ದೇವೆ. ದಯವಿಟ್ಟು ಅಲ್ಲಿನ ಚರ್ಚೆ ಇಲ್ಲಿ ಆಗಿ ಬಿಟ್ಟರೆ,

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ನಾನು ಏನು ಉತ್ತರ ಕೊಡುತ್ತೇನೆ, ನಾನು ಏನು ಇಲ್ಲಿ ಹೇಳುತ್ತೇನೆ ಅದನ್ನು ಮಾಡಿಸುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ :– ನಾಳೆ ಭರವಸೆಗಳ ಸಮಿತಿ ಮುಂದೆ ಬಂದರೆ....

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಅಧ್ಯಕ್ಷರೇ, ಅದು ಭರವಸೆಗಳ ಸಮಿತಿ ಮುಂದೆ ಬಂದರೆ ನಾನು ಕೊಟ್ಟಿರತಕ್ಕಂಥ ಉತ್ತರ ರೈಲ್ವೇಸ್‌ಗೆ ಸಂಬಂಧಪಟ್ಟ ಹಾಗೆ ನಾನು ಕೊಟ್ಟಿರುವ ಉತ್ತರವನ್ನು ಭರವಸೆ ಸಮಿತಿಗೆ ಕೊಡಿ.

ಶ್ರೀ ಜೆ. ಸಿ. ಮಾಧುಸ್ವಾಮಿ :– ಹಾಗಾದರೆ ನೀವು ನಿಯಮ ತಿದ್ದುಪಡಿ ಮಾಡಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಅದನ್ನು ಮಾಡಿ. ಈ ಸರ್ಕಾರದಲ್ಲಿ ಈ ಸದನದಲ್ಲಿ ನಾವು ಕುಳಿತುಕೊಂಡು ಮುಂಗಡ ಪತ್ರವನ್ನು ಮಂಜೂರಾತಿ ಮಾಡಿ, ಕೇರೈಡ್ ಮಾಡಿ ಎಲ್ಲಾ ಸಂಸ್ಥೆಗಳಿಗೆ ದುಡ್ಡನ್ನು ಕೊಡಿಸತಕ್ಕಂಥಾದ್ದನ್ನು ಮಾಡಿದ್ದೇವೆ. ಇದರ ಜೊತೆಗೆ ಅಂಕೋಲ ಮತ್ತು ಹುಬ್ಬಳ್ಳಿ ಮಧ್ಯೆ ಇರತಕ್ಕಂಥ ರೈಲ್ವೆ ಅನ್ನು ಆದಷ್ಟು ಬೇಗ ಸರ್ಕಾರದವರು ಕ್ಲಿಯರ್ ಮಾಡಬೇಕೆಂದು ಅರ್ಜಿ ಮಾಡುತ್ತೇವೆ. ಇದಕ್ಕೆ ಎಷ್ಟು ದುಡ್ಡು ಎನ್ನತಕ್ಕಂಥದ್ದನ್ನು ಕೇಳುತ್ತೇವೆ. ಅದನ್ನು ಚರ್ಚೆ ಮಾಡುವುದರಲ್ಲಿ ತಪ್ಪೇನೂ ಇಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ಪ್ರಶ್ನೆ ಕೇಳುವುದರಲ್ಲಿ ಏನೂ ತಪ್ಪಿಲ್ಲ ಸ್ವಾಮಿ.

ಶ್ರೀ ಜೆ. ಸಿ. ಮಾಧುಸ್ವಾಮಿ :– ಯಾವ ಯಾವುದರ ಮೇಲೆ ಕೇಳಬಾರದು ಅಂತ ನಿಯಮ ಇದೆ. ಇಲ್ಲಾ ನಿಯಮದ ಪ್ರಕಾರ ನಡೆಸಿ; ಇಲ್ಲಾ ನಿಯಮಗಳನ್ನಾದರೂ ತಿದ್ದುಪಡಿ ಮಾಡಿಸಿ, ನಾವೂ ಕೇಳುತ್ತೇವೆ.

ಉಪಾಧ್ಯಕ್ಷರು :– ನೋಡೋಣ.

ಜೋಯಡಾ ತಾಲ್ಲೂಕಿನಲ್ಲಿ ವಿಕಾಸ ಕೇಂದ್ರಗಳನ್ನು ಸ್ಥಾಪಿಸುವ ಕುರಿತು.

523 (5869) : **ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ)** : ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದುಳಿದ ತಾಲ್ಲೂಕುಗಳ ಕೈಗಾರಿಕೆಗಳಿಗೆ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸಲು ಸರ್ಕಾರವು 55 ಕೋಟಿ ವೆಚ್ಚದ ವಿಶೇಷ ಪ್ಯಾಕೇಜ್ ಘೋಸಿದೆಯೇ;